ಮತ್ತೊಂದನ್ನು ಪ್ರೊಡೆಕ್ಷನ್‌ನಿಂದ ಆಳೆಯುತ್ತಾರೆ. Million unit is description of energy, Magawatt It is once again a technical term. ಮಾನ್ಯ ಸದಸ್ಯರಿಗೆ ಎಷ್ಟು ಗೊತ್ತಿದೆಯೋ ನನಗೂ ಅಷ್ಟೇಗೊತ್ತಿದೆ. ನಾನೇನು ಎಲೆಕ್ಟ್ರಿಕಲ್ ಇಂಜಿನಿಯರ್ ಅಲ್ಲ. ಬಹಳ ಜನರು ಮೆಗಾವಾಟ್ ಹಾಕುವ ಕಡೆ ಮಿಲಿಯನ್ ಹಾಕುತ್ತಾರೆ. ಮಿಲಿಯನ್ ಹಾಕುವ ಕಡೆ ಮೆಗಾವಾಟ್ ಹಾಕುತ್ತಾರೆ.

ಶ್ರೀ ಸಿ. ಭೈರೇಗೌಡ.—ಈ ವಿದ್ಯುತ್‌ಗಾರಕ್ಕೆ ಅಗತ್ಯವಿರುವ ಕಲ್ಲಿದ್ದಲಿನ ಪ್ರಮಾಣ ಎಷ್ಟು ? ಸರಬರಾಜು ಆಗುತ್ತಿರುವ ಪ್ರಮಾಣವೆಷ್ಟು ? ಅದಕ್ಕೆ ಉತ್ತರವಾಗಿ ಪ್ರತಿತಿಂಗಳಿಗೆ ಒಂದು ಘಟಕಕ್ಕೆ ೬೦ ಸಾವಿರ ಮೆಟ್ರಿಕ್ ಟನ್‌ಗಳು. ಜುಲೈ ೧೯೮೬ ರಲ್ಲಿ ೪೦ ಸಾವಿರ ಮೆಟ್ರಿಕ್ ಟನ್‌ಗಳು ಸರಬರಾಜಾಗಿದೆ ಎಂದು ಹೇಳಿದ್ದಾರೆ. ಅವಶ್ಯಕತೆ ಇರತಕ್ಕ ಕಲ್ಲಿದ್ದಲು ಸರಬರಾಜು ಆಗದಿದ್ದರೆ ಆ ಘಟಕ ಹೇಗೆ ನಡೆಯುತ್ತದೆ ? ನಡೆಯದಿದ್ದರೆ ಹಾಕಿರತಕ್ಕ ಬಂಡವಾಳ ಲಾಭದಾಯಕವಾಗಿರುತ್ತದೆಯೆ ?

ಶ್ರೀ ಜೆ. ಎಚ್. ಪಟೇಲ್.—ಫುಲ್ ಕೆಪಾಸಿಟಿ ರನ್ ಮಾಡಿದರೆ ಕಲ್ಲಿದ್ದಲಿನ ಕೊರತೆ ಬರುತ್ತದೆ. ಫುಲ್ ಕೆಪಾಸಿಟಿ ರನ್ ಮಾಡದೇ ಇರುವುದರಿಂದ ೪೦ ಸಾವಿರ ಟನ್ ಸಾಕಾಗುತ್ತಿದೆ. ಕಲ್ಲಿದ್ದಲು ಸಿಂಗ್ರೇಣಿಯಿಂದ ಸಪ್ಲೈ ಆಗುವುದು ತಡವಾಗುತ್ತಿತ್ತು. ಅದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ಅದಕ್ಕೆ ಏನು ವ್ಯವಸ್ಥೆ ಬೇಕೋ ಅದನ್ನು ಅವರು ಮಾಡುತ್ತಾರೆ.

ಶ್ರೀ ಸಿ. ಭೈರೇಗೌಡ.—ಅಪಘಾತದ ಬಗ್ಗೆ ಪೊಲಿಮಿನರಿ ರಿಪೋರ್ಟ್ ಇದೆ. ಅಪಘಾತ ಆಗುವುದಕ್ಕೆ ಕಾರಣರಾದವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜೆ. ಎಚ್. ಪಟೇಲ್.—ಕೂಲಿಂಗ್ ವಾಟರ್ ಸಪ್ಲೈ ಟವರ್‌ಗೆ ಹೋಗತಕ್ಕ ಟನಲ್ ಬರ್ಸ್ಟ್ ಆಗಿ ಸುಮಾರು ಆರು ತಿಂಗಳ ಕೆಳಗಡೆ ವಿದ್ಯುತ್ ಉತ್ಪಾದನೆ ನಿಂತಿದ್ದು ನಿಜ. ಅದಕ್ಕೆ ಕಾರಣರು ಯಾರೆಂಬುದನ್ನು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದೇವೆ. ಆಕ್ಸಿಡೆಂಟ್ ಆದ ಭಾಗವನ್ನು ರಿಪೇರಿ ಮಾಡಿ, ಯಂತ್ರಗಳು ಚಾಲೂ ಆಗಿವೆ.

ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಅನುಸೂಚಿತ ವರ್ಗಕ್ಕೆ ಸೇರಿರುವ ಪ್ರಥಮ ದರ್ಜೆ ನೌಕರರ ಬಗ್ಗೆ.

೩೨೦. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಲ್ಲಿ ಅನುಸೂಚಿತ ವರ್ಗಕ್ಕೆ ಸೇರಿರುವ ಪ್ರಥಮ ದರ್ಜೆಯ ನೌಕರರ ಸಂಖ್ಯೆ ಎಷ್ಟು ?

(ಆ) ಆಗಿನ ಐ.ಎ.ಎಸ್. ಅಧಿಕಾರಿಯವರು ಮ್ಯಾನೇಜಿಂಗ್ ಡೈರೆಕ್ಟರಾಗಿ ಅಧಿಕಾರ ವಹಿಸಿಕೊಂಡ ನಂತರ ಎಷ್ಟು ಜನ ಅನುಸೂಚಿತ ವರ್ಗಕ್ಕೆ ಸೇರಿದ ಪ್ರಥಮ ಶ್ರೇಣಿಯ ಹಿರಿಯ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟಿದ್ದಾರೆ ಮತ್ತು ಎಷ್ಟುಮಂದಿ ಅಧಿಕಾರಿಗಳಿಗೆ ಶೋಕಾಸ್‌ನೋಟೀಸನ್ನು ಕೊಟ್ಟಿದ್ದಾರೆ ಹಾಗೂ ಇವುಗಳಿಗೆ ಭೂತಕಾಲದ ಕಾರಣಗಳೆಷ್ಟು ? ಮತ್ತು ವರ್ತಮಾನ ಕಾಲದ ಕಾರಣಗಳೆಷ್ಟು ?

(ಇ) ವೈಯಕ್ತಿಕ ಕಾರಣಗಳೆಷ್ಟು ?

(ಈ) ಈ ಕಾರಣಗಳಲ್ಲಿ ಮೇಲಿನ ಅಧಿಕಾರಿ ಅಂದರೆ ಮ್ಯಾನೇಜಿಂಗ್ ಡೈರೆಕ್ಟರ್‌ರವರ ಜವಾಬ್ದಾರಿ ಎಷ್ಟು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

(ಅ) ಅನುಸೂಚಿತ ಬುಡಕಟ್ಟಿಗೆ ಸೇರಿದ ಇಬ್ಬರು ಮತ್ತು ಅನುಸೂಚಿತ ಜಾತಿಗೆ ಸೇರಿದ ಳಿಳ ಅಧಿಕಾರಿಗಳು ಇರುತ್ತಾರೆ.

(ಅ) ಅನುಸೂಚಿತ ಬುಡಕಟ್ಟಿಗೆ ಸೇರಿದ ಅಧಿಕಾರಿಗಳನ್ನು ಆಮಾನತ್ತಿನಲ್ಲಿಡಲಾಗಿಲ್ಲ. ಅನುಸೂಚಿತ ಜಾತಿಯ ಏರ್ವ ಅಧಿಕಾರಿಯನ್ನು ಆಮಾನತ್ತಿನಲ್ಲಿಡಲಾಗಿದೆ. ಅನುಸೂಚಿತ ಜಾತಿಯ ಇಬ್ಬರು ಅಧಿಕಾರಿಗಳಿಗೆ ಶೋಕಾಸ್ ನೋಟೀಸ್ ಕೊಡಲಾಗಿದೆ. ಕಾರ್ಯನಿರ್ವಹಣೆಯಲ್ಲಿ ಕೆಲವೊಂದು ಕರ್ತವ್ಯ ಲೋಪಗಳನ್ನು ಅವರುಗಳು ಮಾಡಿರುವುದರಿಂದ ಅವರ ವಿರುದ್ಧ ಈ ಕ್ರಮ ತೆಗೆದು ಕೊಳ್ಳಲಾಗಿದೆ,

(ಇ) ಯಾವುದೇ ತರಹದ ವೈಯಕ್ತಿಕ ಕಾರಣಗಳಿಲ್ಲ.

(ಈ) ಪ್ರಶ್ನೆ (ಇ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗೆ ಯಾವ ಉತ್ತರವು ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ ನನ್ನ ಎಡನೆಯ ಪ್ರಶ್ನೆಗೆ ಉತ್ತರವಾಗಿ ಮಂತ್ರಿಗಳು ಕಾರ್ಯನಿರ್ವಹಣೆಯಲ್ಲಿ ಕೆಲವೊಂದು ಕರ್ತವ್ಯ ಲೋಪಗಳನ್ನು ಅವರುಗಳು ಮಾಡಿರುವುದರಿಂದ ಅವರ ವಿರುದ್ಧ ಈ ಕ್ರಮ ಕೈಗೊಳ್ಳಲಾಗಿದೆಯೆಂದು ಹೇಳಿದ್ದಾರೆ. ಕರ್ತವ್ಯಲೋಪವನ್ನು ಮಾಡಿದ್ದಾರೆ ಎಷ್ಟು ವರ್ಷಗಳ ಹಿಂದೆ ಮಾಡಿದ್ದಾರೆ ? ಇದರಲ್ಲಿ ಮ್ಯಾನೇಜಿಂಗ್ ಡೈರೆಕ್ಟರವರ ಜವಾಬ್ದಾರಿ ಇದೆಯೆ ? ಮ್ಯಾನೇಜಿಂಗ್ ಡೈರೆಕ್ಟರವರ ಜವಾಬ್ದಾರಿ ಇದ್ದರೆ ಅವರ ಕರ್ತವ್ಯಚ್ಯುತಿಯ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನೇನು ಮಾಡಿದ್ದೀರಿ ? ಅದನ್ನು ಹೇಳಿ ಆಮೇಲೆ ಬೇರೆ ಪ್ರಶ್ನೆಗಳನ್ನು ಕೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಕರ್ತವ್ಯ ನಿರ್ವಹಣೆಯಲ್ಲಿ ಲೋಪಮಾಡಿದ್ದಾರೆ. ಕರ್ತವ್ಯ ನಿರ್ವಹಣೆ ಲೋಪವನ್ನು ಯಾವ ಕಾಲದಲ್ಲಿ ಮಾಡಿದ್ದಾರೆ ಅದಕ್ಕೆ ಕಾರಣರು ಯಾರು ಎಂದು ಕೇಳುತ್ತಿದ್ದಾರೆ. ಈಗ ಸಸ್ಪೆಂಡ್ ಮಾಡಿರುವಂತಹ ಅಧಿಕಾರಿ ಹಿಂಡೆ ಕರ್ತವ್ಯ ಲೋಪವನ್ನು ಮಾಡಿದ್ದರಿಂದ ಸಸ್ಪೆಂಡ್ ಮಾಡಿದ್ದೇವೆ. ಕರ್ತವ್ಯ ಲೋಪವನ್ನು ಯಾವಾಗ ಮಾಡಿದ್ದರು ಎನ್ನುವ ವಿವರವನ್ನು ಆಮೇಲೆ ತರಿಸಿ ಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಆ ವಿವರ ಮಂತ್ರಿಗಳ ಹತ್ತಿರ ಇಲ್ಲದಿದ್ದರೆ ಅದು ನನ್ನ ಹತ್ತಿರ ಇದೆ.

CHARGE SHEET

"You, Shri Puttarachappa, Sr. Personnel Manager (MPP and Training now under suspension – were previously working as Sr. Personnel Manager (Est). When you are working as Sr. Personnel Manager (Est), Sri K.B.D. Beeraiah, Jt. General Manager (Operations), had sent a note on 5-4-1985 regarding the settlement of grievances of 30 employees working in the Cement Plant who were neither in the production unit nor in the maintenance unit requesting to sort out the issue in consultation with the Workers' Association and to take steps to merge these workers either with Cement Plant group or with the Mechanical Maintenance group, in the interest of smooth running of the Production Department in order to achieve targeted production. The JGM (operations) had again requested you to find out a solution in this regard. Accordingly, a meeting was also held in this regard in the Chambers of Sr. Personnel Manager (Est) on 18-6-1985. You had then put up a note containing some proposals to the JGM (Operations)/Chief Admnv. Officer/VC and MD. The file was cleared by JGM (Operations) and JGM (Maintenance) on 4-7-1985 and

5-7-1985 respectively. The CAO by his remarks dated 9-7-1985 stated as follows:

"Pl, discuss"

(Sr. PIM-Est)

Sd/-

But you neither discussed the issue.....

As a prudent Sr. Personnel Manager, you ought to have taken immediate action to sort out the problems. ...."

ಎಂದು ಹೇಳುತ್ತಾರೆ. ಇದರಲ್ಲಿ ವೈಯಕ್ತಿಕವಾಗಿರತಕ್ಕ ಜವಾಬ್ದಾರಿ ಎಷ್ಟು ? ಪರೋಕ್ಷವಾಗಿರತಕ್ಕ ಜವಾಬ್ದಾರಿ ಎಷ್ಟು ? ಮ್ಯಾನೇಜಿಂಗ್ ಡೈರೆಕ್ಟರ್ ಯಾರ್ಯಾರು ಇದ್ದಾರೆ ಅವರ ಜವಾಬ್ದಾರಿ ಎಷ್ಟೆಂಬುದನ್ನು ಹೇಳುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರವರ ಪ್ರಶ್ನೆ ಬಂದಿಲ್ಲ. ಅನುಸೂಚಿತ ವರ್ಗಕ್ಕೆ ಸೇರಿರುವ ಪ್ರಥಮ ದರ್ಜೆಯ ನೌಕರರ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ. ಪುಟ್ಟರಾಜಪ್ಪ ಎಂಬುವರಿಗೆ ಶೋಕಾಸ್ ನೋಟೀಸ್ ಬಂದಿದೆ. ಅವರ ಮೇಲೆ ಮೂರು ಕಾರಣಗಳಿಗೋಸ್ಕರ ಶೋಕಾಸ್ ನೋಟೀಸ್ ಬಂದಿದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಒಂದನೆಯ ಕಾರಣ loss of cement production ಎರಡನೆಯದು manipulation and tampering of the records in having unauthorisedly regularised the appointment of grinders in re conditioning shop. ಮೂರನೆಯದು for having brought political pressure, ಮಾನ್ಯ ಬಸವಲಿಂಗಪ್ಪನವರು ಕಾಗದ ಬರೆದರು ಎನ್ನುವ ಅಭಿಪ್ರಾಯವಿದೆ. ಆ ಕಾರಣದಿಂದ ಅಲ್ಲ. ಆ ಕಾರಣದಿಂದ ಆಗಿದ್ದರೆ ಮ್ಯಾನೇಜಿಂಗ್ ಡೈರೆಕ್ಟರ್‌ರವರಿಂದ ಎಕ್ಸ್‌ಪ್ಲೆನೇಷನ್ ತರಿಸುತ್ತೇನೆ. ಈ ಸಮಯದಲ್ಲಿ ಒಂದೂ ಮಾತನ್ನು ಹೇಳುತ್ತೇನೆ, ಸರ್ವೀಸ್ ರೂಲ್ಸ್‌ನಲ್ಲಿ ಯಾವುದೇ ಪೊಲಿಟಿಕಲ್ ಪ್ರೆಷರ್ ತರಬಾರದೆಂದು ಇದೆ. ಕೆಲವು ಶಾಸಕರು ಸ್ವಾಭಾವಿಕವಾಗಿ ಒಂದಲ್ಲ ಒಂದು ರೀತಿಯಲ್ಲಿ ದೂರು ಕೊಡುವುದು ನಡೆದು ಬಂದಿದೆ. ನಮ್ಮ ರಾಜ್ಯದಲ್ಲಿಯೇ ಅಲ್ಲ ಆದು ಎಲ್ಲಾ ಕಡೆ ನಡೆಯುತ್ತಿದೆ. ಈ ತರಹ ರಾಜಕೀಯ ಒತ್ತಡದಿಂದ ಆಡಳಿತಕ್ಕೆ ಧಕ್ಕೆಯಾಗಿ ಏನಾದರೂ ಆಡಳಿತ ವ್ಯವಸ್ಥೆ ಸಡಿಲಗೊಂಡಾಗ, ಅಧಿಕಾರಿಯ ಹೈಯರ್ ಅಥಾರಿಟಿ ಆಕ್ಷನ್ ತೆಗೆದುಕೊಳ್ಳುತ್ತಾರೆ. ಅದನ್ನು ಸಂಪೂರ್ಣ ಬೇಡವೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಆಡಳಿತಕ್ಕೆ ಅಹಾನುಕೂಲವಾದರೆ ಕ್ರಮ ತೆಗೆದುಕೊಳ್ಳಿ. ಕಪ್ಪವನ್ನು ಗಮನಕ್ಕೆ ತಂದಾಗ.....

ಶ್ರೀ ಜೆ. ಎಚ್. ಪಟೇಲ್.—ಪರ್ಟಿಕ್ಯುಲರ್ ಕೇಸ್‌ನಲ್ಲಿ, ತಾವು ಆಸಕ್ತಿ ವಹಿಸಿದ್ದೀರಿ ಎನ್ನುವ ಕಾರಣದಿಂದ ಸಸ್ಪೆಂಡ್ ಮಾಡಿದ್ದರೆ ಅದನ್ನು ವಿಚಾರಮಾಡಿ ಸರಿಪಡಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಪ್ರಶ್ನೆ ಇಷ್ಟೇ ಇರುವುದು. ಮಾನ್ಯ ಸಚಿವರು ಇದರಲ್ಲಿ ೪ ಜನರಿಗೆ ಶೋಕಾಷ್ ನೋಟೀಸ್ ಕೊಟ್ಟಿದ್ದಾರೆ. ಅದರಲ್ಲಿ ಪರಿಶಿಷ್ಟ ಜಾತಿಗೆ ಸೇರಿದವರು ಒಬ್ಬರು ಅಂತ ಹೇಳಿದ್ದಾರೆ. ಬೇರೆಯವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಶ್ರೀ ಪುಟ್ಟರಾಜಪ್ಪ ಎಂಬುವರು ಸೀನಿಯರ್ ಪರ್ಸನಲ್ ಆಫೀಸರ್ ಆಗಿದ್ದಂತಹವರನ್ನು ಸಸ್ಪೆಂಡ್ ಮಾಡಿ ಎಂ.ಡಿ. ಜಾತಿಗೆ ಸೇರಿದ ಒಬ್ಬ ಹೆಂಗಸನ್ನು ತಂದು ಅಲ್ಲಿ ಕೂರಿಸುವುದಕ್ಕೋಸ್ಕರ ಇವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಅವರು ಬಡ್ತಿಗೆ ಅರ್ಹರಾಗಿದ್ದು ಅವರಿಗೆ ಸಿಕ್ಕುವಂತಹ ಅವಕಾಶವನ್ನು ತಪ್ಪಿಸಬೇಕೆಂಬ ದುರುದ್ದೇಶದಿಂದ ಹೀಗೆ ಮಾಡಿದ್ದಾರೆ. ಈ ರೀತಿಯ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಇಂತಹ ಅಧಿಕಾರದಲ್ಲಿರುವುದರಿಂದ, ಇಂತಹ ಘಟನೆಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಅವರನ್ನು ಅಲ್ಲಿಂದ ವರ್ಗಾಯಿಸಿ ಸಣ್ಣಪುಟ್ಟ ಜನರಿಗೆ ತೊಂದರೆಯಾಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಜೆ. ಹೆಚ್. ಪಟೇಲ್.—ಅಲ್ಲಿರತಕ್ಕ ಮ್ಯಾನೇಜಿಂಗ್ ಡೈರೆಕ್ಟರ್ ಯಾವುದೇ ತಪ್ಪನ್ನು ಮಾಡಿದ್ದಾರೆಂಬುದಾಗಿ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಈಗ ಇರತಕ್ಕ ಮ್ಯಾನೇಜಿಂಗ್ ಡೈರೆಕ್ಟರ್ ಅಲ್ಲಿಗೆ ಹೋದ ಮೇಲೆ ಕೆಲಸದ ನಿರ್ವಹಣೆಯಲ್ಲಿ ಸಾಕಷ್ಟು ಸುಧಾರಣೆಗಳಾಗಿವೆ. ಅದು ನನಗೆ ಗೊತ್ತಿದೆ. ಅವರು ಬರೀ ಎಸ್.ಸಿ. ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂಬ ಅಭಿಪ್ರಾಯ ತಪ್ಪು.

ಶ್ರೀ ಬಿ. ಬಸವಲಿಂಗಪ್ಪ.—ತೆಗೆದುಕೊಂಡಿದ್ದಾರೆ.

ಶ್ರೀ ಜೆ. ಎಚ್. ಪಟೇಲ್.—ಳಿಳಿ ಜನರಲ್ಲಿ ಕೇವಲ ಇವರೊಬ್ಬರಿಗೆ ಶೋಕಾಸ್ ನೋಟೀಸ್ ಕೊಟ್ಟಿದ್ದಾರೆಂಬುದಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರ ಬಗ್ಗೆ ನಾನು ಸಂಬಂಧಪಟ್ಟವರಿಂದ ವಿವರಣೆಯನ್ನು ಪಡೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಬಸವಲಿಂಗಪ್ಪನವರಲ್ಲಿ ಏನಾದರೂ ಮಾಡಿಕೊಳ್ಳುವುದು ಇಷ್ಟೆ. ಅವರು ಅನುಭವಿಗಳು. ರಾಜ್ಯ ಸರ್ಕಾರವನ್ನು ನಡೆಸಿದಂತಹ ಅನುಭವಿಗಳು. ಕೆಲವು ಅದಕ್ಷರನ್ನು ಭ್ರಷ್ಟಾಚಾರಿಗಳನ್ನು ರಕ್ಷಣೆ ಮಾಡಬಾರದು. ಇದರಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗ ಎಂಬ ಕಲ್ಪನೆ ಬೇಡ.

ಶ್ರೀ ಬಿ. ಬಸವಲಿಂಗಪ್ಪ.—ಅಯಿತು.

ಶ್ರೀ ಜೆ ಹೆಚ್. ಪಟೇಲ್.—ನಾನು ಹಿಂದೆ ಎದ್ಯುಚ್ಛಕ್ತಿ ಮಂತ್ರಿಯಾಗಿದ್ದಾಗ ಆದಂತಹ ಒಂದು ಅನುಭವವನ್ನು ಹೇಳಂತೆನೆ. ಕೋಲಾರದಲ್ಲಿ ಒಬ್ಬ ಸೂಪರ್ ಕೀಪರ್ ಎಸ್.ಸಿಗೆ ಸೇರಿದಂತಹವನನ್ನು ಸಸ್ಪೆಂಡ್ ಮಾಡಿದ್ದರು. ಏಕೆ ಮಾಡಿದ್ದಾರೆ ಎಂಬುದನ್ನು ನೋಡುವುದಕ್ಕೆ ಹೋಗಿದ್ದೆ. ಅವರನ್ನು ಸಸ್ಪೆಂಡ್ ಮಾಡುವುದಕ್ಕೆ ಕಾರಣ ಅಲ್ಲಿ ತಾವ್ರದ ತಂತಿಗಳನ್ನು ಮಾರಿಕೊಳ್ಳುತ್ತಿದ್ದ ಎನ್ನುವುದು. ನಾನು ಹೋಗಿ ಏಕೆ ಈ ರೀತಿ ಮಾಡಿದೆ ಅಂತ ಕೇಳಿದಾಗ, ಆತ ಹೇಳಿದ್ದು ಏನೆಂದರೆ. ನನ್ನ ಮೇಲೆ ಎಗ್ಸಿಕ್ಯೂಟಿವ್ ಇಂಜಿನೀಯರ್ ಒಕ್ಕಲಿಗರು ಇದ್ದಾರೆ. ಅವರು ಟ್ರಾನ್ಸ್‌ಫಾರ್ಮರ್‌ಗಳನ್ನೇ ಮಾರಿಕೊಳ್ಳುತ್ತಾರೆ. ಅವರ ಮೇಲೆ ಸೂಪರಿಂಟೆಂಡಿಂಗ್ ಇಂಜಿನೀಯರ್ ಲಿಂಗಾಯಿತರು ಇದ್ದಾರೆ. ದೊಡ್ಡ ದೊಡ್ಡ ತಂತಿಯ ಬಂಡಲ್‌ಗಳನ್ನು ಮಾರಿಕೊಳ್ಳುತ್ತಾರೆ. ಅವರ ಮೇಲೆ ಚೀಫ್ ಇಂಜಿನೀಯರ್ ಬ್ರಾಹ್ಮಣರು ಇದ್ದಾರೆ. ಅವರು ಮಾಡುವುದೇ ಗೊತ್ತಾಗುವುದಿಲ್ಲ. ನಾನೊಬ್ಬ ಹರಿಜನ ಸಣ್ಣ ಬೋಲ್ಟು ನಟ್ಟು ತಿನ್ನುವಾರದಾ, ನನ್ನನ್ನು ಬಿಟ್ಟು ಬಿಡಿ ಅಂತ ಹೇಳಿದ. ಈ ಲಾಜಿಕ್ ಬೇಡ. ಒಕ್ಕಲಿಗರಾದರೇನು, ಲಿಂಗಾಯಿತರಾದರೇನು, ಬ್ರಾಹ್ಮಣರಾದರೇನು, ಹರಿಜನರಾದರೇನು? ಭ್ರಷ್ಟಾಚಾರವನ್ನು ಮಾಡಿದಾಗ, ತಪ್ಪು ಮಾಡಿದಾಗ ಅವರು ಇಂತಹವರು, ಇವರು ಅಂತಹವರು ಅಂತ ಹೇಳುವುದು ಬೇಡ. ನಿಷ್ಪಕ್ಷಪಾತವಾಗಿದ್ದು ವಿನಾಕಾರಣ. ಇವರ ಮೇಲೆ ಕ್ರಮ ತೆಗೆದುಕೊಂಡಿದ್ದರೆ, ಅವರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಸರ್ಕಾರಿ ನೌಕರರ ಬಗ್ಗೆ ತೆಗೆದುಕೊಂಡಿರುವಂತಹ ಕ್ರಮವನ್ನು ನಾನು ಹೇಳಿದ್ದೇನೆ. ಅದನ್ನು ಮಾಡಬಾರದು ಅಂತ ನಾನು ಹೇಳುವುದೇ ಇಲ್ಲ. ಆದರೆ ವಿನಾಕಾರಣ ಯಾವ ಕಾರಣಕ್ಕಾಗಿ ಇವರನ್ನು ಅಮಾನತ್ತಿನಲ್ಲಿಟ್ಟಿದ್ದಾರೆಂಬುದನ್ನು ತಾವು ತಕ್ಷಣವೇ ವಿಚಾರಣೆ ಮಾಡಿ, ತಪ್ಪಿತಸ್ಥರನ್ನು ಮನೆಗೆ ಕಳುಹಿಸಿ, ಅದನ್ನು ನಾನು ಬೇಡ ಅಂತ ಹೇಳುವುದಿಲ್ಲ, ಆದರೆ ಇವರು ಮಾಡಿರುವುದು ಏನು ? ವಿನಾಕಾರಣ ಆ ಸಮಯದಲ್ಲಿ ಕಾರ್ಖಾನೆಯಲ್ಲಿ ಮುಷ್ಕರವಾದ ಬಗ್ಗೆ ಬೇರೊಬ್ಬರು ಕೊಟ್ಟಂತಹ ವರದಿಯ ಆಧಾರದ ಮೇಲೆ ಇವರನ್ನು ಅಮಾನತ್ತಿನಲ್ಲಿಟ್ಟಿದ್ದಾರೆ. ಕೆಲಸಕ್ಕೆ ಸೇರಿದ ಮೇಲೆ ನಿಯಮಕ್ಕೆ ಸಂಬಂಧಪಟ್ಟಂತೆ ಎಲ್ಲರೂ ಇರಬೇಕಾಗುತ್ತದೆ. ಆದರಲ್ಲಿ ಏನೂ ಭಿನ್ನಾಭಿಪ್ರಾಯ ಇಲ್ಲವೇ ಇಲ್ಲ. ಆದರೆ ವಿನಾಕಾರಣವಾದ ಕಾರಣಗಳ ಮೇಲೆ ಅಮಾನತ್ತಿನಲ್ಲಿ ಇಡುವಂತಹದ್ದು ಒಳ್ಳೆಯದಲ್ಲ. ೨೫ ವರ್ಷಗಳಿಂದಲೂ ಸೇವೆಯಲ್ಲಿರತಕ್ಕ ಒಬ್ಬ ಅಧಿಕಾರಿ ಎಂದೂ ತಪ್ಪು ಮಾಡಿದೇ ಇರತಕ್ಕಂತಹವನು, ಇವರು ಬಂದ ತಕ್ಷಣವೇ ತಪ್ಪು ಮಾಡಿದ ಎಂದು ಹೇಳಿದರೆ ಅದನ್ನು ನಂಬಬಹುದೇ ? ೧೯೮೫ನೇ ಇಸವಿಯಲ್ಲಿ ಮುಷ್ಕರವಾಗಿದ್ದಕ್ಕೂ ಈ ಅಧಿಕಾರಿಗೂ ಏನು ಸಂಬಂಧ ?

ಶ್ರೀ ಜೆ. ಹೆಚ್. ಪಟೇಲ್.—ನಾನು ಈಗಾಗಲೇ ಹೇಳಿದ್ದೇನೆ. ನಿನ್ನೆ ಮಾನ್ಯ ಸದಸ್ಯರು ನನ್ನ ಜೊತೆ ದೂರವಾಣಿಯಲ್ಲಿ ಪ್ರಸ್ತಾಪ ಮಾಡಿದಾಗ ಈ ವಿಷಯ ನನ್ನ ಗಮನಕ್ಕೆ ಬಂತು ಅಲ್ಲಿನ ಮ್ಯಾನೇಜಿಂಗ್ ಡೈರೆಕ್ಟರ್ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ವಿನಾಕಾರಣ ಶ್ರೀ ಪುಟ್ಟರಾಜಪ್ಪ

ಎಂಬ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಂಡಿದ್ದರೆ, ಅದನ್ನು ಸರಿಪಡಿಸುತ್ತೇನೆ. ಇದರ ಬಗ್ಗೆ ಎಂ.ಡಿ.ಯವರಿಂದ ವಿವರಣೆಯನ್ನು ಕೂಡ ತರಿಸಿಕೊಂಡು ಉದ್ದೇಶಪೂರ್ವಕವಾಗಿ ತಪ್ಪು ಮಾಡಿದ್ದರೆ ಅವರನ್ನು ಶಿಕ್ಷೆ ಮಾಡುತ್ತೇನೆ.

ಶಹಾಬಾದ್ ಕ್ಷೇತ್ರದಲ್ಲಿನ ಪಶುವೈದ್ಯ ಆಸ್ಪತ್ರೆ ಸೌಲಭ್ಯಗಳು

೨೦೮ (ಡಿ) ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ರೇಷ್ಮೆ, ವ್ಯವಸಾಯ, ಪಶು ಸಂಗೋಪನೆ ಹಾಗೂ ಮಿನಾಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಾಬಾದ್ ಮತ ಕ್ಷೇತ್ರದಲ್ಲಿ ಯಾವ ಯಾವ ಕಡೆಗಳಲ್ಲಿ ಪಶು ಆಸ್ಪತ್ರೆಗಳ ಸೌಕರ್ಯವಿದೆ,

ಆ) ಈ ಕ್ಷೇತ್ರದ ಸಂಪೂರು ೪,೮೦೦-೬,೦೦೦ ಜನ ಸಂಖ್ಯೆಯುಳ್ಳ ಹೊನಗುಂಟಾ, ಕೊಲ್ಲೂರ ಹಲಕಟ್ಟಾ, ವರ್ತೂರ, ಭಂಕೂರ (ಚಿತ್ತಾಪುರ ತಾಲ್ಲೂಕು) ಮತ್ತು ಹಾಗರಗುಂಡಗಿ, ಹೇರೂರ ಕೇರಜಾಗಿ (ಗುಲ್ಬರ್ಗ ತಾಲ್ಲೂಕು) ಇವುಗಳಲ್ಲಿ ಹೊಸ ಪಶುವೈದ್ಯ ಆಸ್ಪತ್ರೆಗಳನ್ನು ತೆರೆಯಲು ಸರ್ಕಾರದವರು ಯಾವುದಾದರೂ ಯೋಜನೆಯನ್ನು ಹಾಕಿಕೊಂಡಿದ್ದಾರೆಯೆ,

ಇ) ಹಾಗಿದ್ದಲ್ಲಿ, ಅದನ್ನು ಕಾರ್ಯಗತಗೊಳಿಸಲು ಎಷ್ಟು ವರ್ಷಗಳು ಬೇಕು ?

ಶ್ರೀ ಕೆ. ಎಂ. ಕೃಷ್ಣಾ ರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ) ೧. ಪಶುವೈದ್ಯ ಶಾಲೆ, ಶಹಾಬಾದ್] ಚಿತ್ತಾಪುರ ತಾಲ್ಲೂಕು
೨. ಗ್ರಾಮೀಣ ಪಶುವೈದ್ಯಶಾಲೆ, ಸಲ್ವಾರ್]
೩. ಗ್ರಾಮೀಣ ಪಶುವೈದ್ಯ ಶಾಲೆ, ಫರತ್‌ಬಾದ್ ಗುಲ್ಬರ್ಗಾ ತಾಲ್ಲೂಕು

ಆ) ಸದ್ಯಕ್ಕೆ ಈ ಸ್ಥಳಗಳಲ್ಲಿ ಪಶುವೈದ್ಯ ಆಸ್ಪತ್ರೆಗಳನ್ನು ಸ್ಥಾಪಿಸುವ ಯೋಜನೆ ಸರ್ಕಾರದ ಮುಂದಿಲ್ಲ. ಆದರೂ ಸದರಿ ಗ್ರಾಮಗಳಲ್ಲಿ ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ಸ್ಥಾಪಿಸಲು ೧೦ ಅಂಶಗಳ ಮಾಹಿತಿಯನ್ನು ಕರೆಯಲಾಗಿದೆ.

ಇ) ೧೦ ಅಂಶಗಳ ಮಾಹಿತಿಯ ಆಧಾರದ ಮೇರೆ ಹಾಗೂ ತಾಂತ್ರಿಕ ಸಿಬ್ಬಂದಿಯ ಮತ್ತು ಹಣಕಾಸಿನ ಅನುಕೂಲತೆಗಳನ್ನು ನೋಡಿಕೊಂಡು ಯಾವುದಾದರೊಂದು ಗ್ರಾಮಗಳಲ್ಲಿ ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ತೆರೆಯಲು ಪರಿಶೀಲಿಸಲಾಗುವುದು.

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಸಚಿವರು ಈಗ ನನ್ನ ಪ್ರಶ್ನೆಗೆ ಏನು ಉತ್ತರವನ್ನು ಕೊಟ್ಟಿದ್ದಾರೆ, ಇದೇ ಪ್ರಶ್ನೆಯನ್ನು ಹಿಂದೆ ಅಂದರೆ ೧೯೬೩ನೇ ಇಸವಿಯಲ್ಲಿ ಕೇಳಿದಾಗಲೂ ಇದೇ ಉತ್ತರವನ್ನು ಅಂದು ಇದ್ದಂತಹ ಮಂತ್ರಿಗಳು ನೀಡಿದ್ದರು. ೪,೦೦೦ರಿಂದ ೬,೦೦೦ ಸಾವಿರ ಜಾನುವಾರುಗಳಿರು ವಂತಹ ಊರುಗಳನ್ನೂ ಕೂಡ ಹೇಳಿದ್ದೇನೆ. ಅವುಗಳು ಯಾವುವೆಂದರೆ ಹೊನಗುಂಟಾ, ಕೊಲ್ಲೂರ, ಹಲಕಟ್ಟಾ, ವರ್ತೂರ, ಬಂಕೂರ ಇವು ಚಿತ್ತಾಪುರ ತಾಲ್ಲೂಕಿಗೆ ಸೇರಿದ ಊರುಗಳು. ಹಾಗೂ ಗುಲ್ಬರ್ಗಾ ತಾಲ್ಲೂಕಿನ (ನನ್ನ ಕ್ಷೇತ್ರಕ್ಕೆ ಸೇರಿದ) ಹಾಗರಗುಂಡಗಿ, ಹೇರೂರ, ಕೇರಜಾಗಿ ಈ ಮೂರು ಊರುಗಳಲ್ಲೂ ಜಾನುವಾರುಗಳ ಸಂಖ್ಯೆ ೪,೦೦೦ದಿಂದ ೬,೦೦೦ ಇದೆ. ದಯವಾಡಿ ನಿಮ್ಮ ೧೦ ಅಂಶದ ಕಾರ್ಯಕ್ರಮದನ್ವಯ ನಾನು ಈ ಮೊದಲು ಹೇಳಿರುವಂತಹ ೮-೧೦ ಹಳ್ಳಿಗಳಲ್ಲಿ ಬರುವ ವರ್ಷದಲ್ಲಿ ಅಂದರೆ ೧೯೬೬-೬೮ನೇ ಸಾಲಿನಲ್ಲಾದರೂ ಗ್ರಾಮೀಣ ಪಶು ವೈದ್ಯ ಶಾಲೆಗಳನ್ನು ತೆರೆಯುವುದಕ್ಕೆ ಭರವಸೆ ನೀಡುತ್ತೀರಾ ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ.—ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಒಟ್ಟು ಜಾನುವಾರುಗಳ ಸಂಖ್ಯೆ ೧,೧೩,೦೫೦ ಇದೆ. ಅದರ ಪ್ರಕಾರ ಇನ್ನೂ ೯ ಪಶುವೈದ್ಯ ಶಾಲೆಗಳನ್ನು ತೆರೆಯಬೇಕಾಗುತ್ತದೆ. ೧೦ ಅಂಶಗಳ ಕಾರ್ಯಕ್ರಮದನ್ವಯ ೫೫೦೦ ಪಶುಗಳಿಗೆ ಒಂದು ಪಶುವೈದ್ಯ ಶಾಲೆ ಪ್ರಕಾರ ಸುಮಾರು ೯ ಪಶುವೈದ್ಯ ಶಾಲೆಗಳು ಇನ್ನೂ ಬೇಕಾಗಿವೆ ಎಂಬಂತೆ ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಹಂತಹಂತವಾಗಿ ಪಶುವೈದ್ಯ ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಸೂಕ್ತ ಕಾಲದಲ್ಲಿ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಗುವುದು.